ಅತ್ತಳು. ಆ ತುದಿಯಲ್ಲಿ ಕುಳಿತಿದ್ದ ಅಪ್ಪ ಎದ್ದು ಬರಲಿಲ್ಲ. ಆಗಲೂ ಅಪ್ಪನ ಪ್ರಾರ್ಥನೆ ಚಾಲ್ತಿಯಲ್ಲಿತ್ತೇ?

ಮಗುವಿನ ಜೀವ ಪೂರ್ತಿ ಸ್ತಬ್ಧವಾಗಿದೆ ಎಂದೇ ಅಪ್ಪ-ಅಮ್ಮ ಭಾವಿಸಿದ್ದರು. ಎನ್‌ಐಸಿಯೂ ಒಳಗೆ ವೈದ್ಯರ ತಂಡವೇ ಜಮೆಯಾಗಿತ್ತು. ಅವರು ಮಗುವಿನ ಈ ಸ್ಥಿತಿಯನ್ನು ವಿಡಿಯೊ ಮಾಡಿದರು. ಚಿತ್ರಗಳನ್ನು ತೆಗೆದರು. ಅದನ್ನೆಲ್ಲ ದಿಲ್ಲಿಯಲ್ಲಿರುವ, ವಿದೇಶದಲ್ಲಿರುವ ತಜ್ಞರಿಗೆ ರವಾನೆ ಮಾಡಿದರು. ಟ್ರೀಟ್‌ಮೆಂಟ್ ಜಾರಿಯಲ್ಲಿತ್ತು. ಅಪ್ಪ-ಅಮ್ಮ ಐಸಿಯೂ ಕಡೆಗೆ ನೋಡಲಿಲ್ಲ. ಅವರು ಪ್ರತಿ ಉಸಿರನ್ನೂ ದೇವರಿಗೇ ಅರ್ಪಿಸಿ ಮಗುವಿಗಾಗಿ ಬೇಡಿಕೊಳ್ಳುತ್ತಿದ್ದರು. ಅಲ್ಲಿಂದ ಯಾವ ಕ್ಷಣವಾದರೂ ಕರೆ ಬರಬಹುದು, ಮುಂದಿನ ವಿಧಿಗಳಿಗೆ ನಾವು ಸಿದ್ಧರಾಗಬೇಕು ಎಂದು ಅವರ ಒಳಮನಸ್ಸು ಹೇಳುತ್ತಿತ್ತೋ ಏನೋ. ಮನಸ್ಸು ಕನಲಿ ಹೋದಾಗ ಮುಂದೆ ಸಂಭವಿಸುವುದೆಲ್ಲ ಕತ್ತಲೇ ಅನ್ನಿಸುವುದು ಸಹಜ.



ಆದರೆ, ಅದು ನಿಜವಾಗಲಿಲ್ಲ.

ಅಮ್ಮನ, ಅಪ್ಪನ ಕಣ್ಣುಗಳಲ್ಲಿದ್ದ ನೀರು ಬತ್ತಿ ಹೋಗಿತ್ತು. ಕೆನ್ನೆಗೆ ಬಿದ್ದ ಹನಿಗಳು ಒಣಗಿ ಹೋಗಿದ್ದವು. ಎರಡು ದಿನಗಳು ಕಳೆದವು. ಸಾಕ್ಷಾತ್ ಅಗ್ನಿಕುಂಡವನ್ನು ದಾಟಿ ಬಂದಿತ್ತು ಮಗು. ಆ ಪರೀಕ್ಷೆಯೇ ಕೊನೆ. ನಿಧಾನಕ್ಕೆ ಚೇತರಿಸಿಕೊಳ್ಳುತ್ತಾ ಹೋಯಿತು. ಸಾವಿನ ಕೊನೆಯ ಕಣವನ್ನೂ ಅದು ಸ್ಪರ್ಶಿಸಿತು ಅಂದರೆ ಇದೇನಾ?

ಆ ಹೊತ್ತಿಗೇ ದಯಾನಂದನ ಕೈಯೊಳಗೆ ಕೈಯಿಟ್ಟು ಉಜ್ಜುತ್ತಲೇ ಇದ್ದ ತನ್ನ ಬೆರಳಿಗೆ ಒಂದು ಬೆಚ್ಚನೆಯ ಸ್ಪರ್ಶವಾದಂತೆ ಅನಿಸಿತು ಜೀವಾಳಿಗೆ. ನಾನು ಹೇಳಿದ ನನ್ನದೇ ಕಥೆಯು ದಯಾನನ್ನು ತಲುಪುತ್ತಿದೆ ಎಂಬ ಸಮಾಧಾನದ ಛಾಯೆಮೂಡಿತು. ಒಮ್ಮೆಗೇ ಉಸಿರೆಳೆದುಕೊಂಡಳು. ತನ್ನ ಪ್ರೀತಿಯ ಸ್ಪರ್ಶವನ್ನೂ, ಪ್ರಾರ್ಥನೆಯನ್ನೂ ಜಾರಿಯಲ್ಲಿಟ್ಟಳು.

ಮಲ್ಟೀ ಎಕ್ಸೆಲ್ ಓಲ್ವೋ ಬಸ್ಸು ನಾಗಲೋಟದಿಂದ ಧಾವಿಸುತ್ತಿತ್ತು. ಮೆಲ್ಲಗೆ ಕಿಟಕಿಯ ಪರದೆ ಸರಿಸಿದಳು. ಕತ್ತಲಿನಾಚೆಗೆ ಪೂರ್ಣ ಚಂದಿರ ಹಿಂಬಾಲಿಸಿಕೊಂಡು ಬರುತ್ತಿರುವ ದೃಶ್ಯ ಚೇತೋಹಾರಿಯಾಗಿತ್ತು. ಅವನೊಡನೆ ಮನಸಿನಲ್ಲಿ ಮಾತನಾಡುವುದನ್ನು ಮಾತ್ರ ನಿಲ್ಲಿಸಲಿಲ್ಲ.

‘ಎನ್‌ಐಸಿಯೂ ವಾರ್ಡಿನೊಳಗೆ ಹೋದಾಗ ಮಗು ತನ್ನ ಬಾಯಲ್ಲಿರುವ ಪೈಪುಗಳನ್ನೆಲ್ಲ ಕಚ್ಚಿಕೊಳ್ಳುತ್ತಿತ್ತು. ಅದು ಅಳುತ್ತಿತ್ತೋ, ಹಸಿವೆಯಾಗಿತ್ತೋ? ನನ್ನಿಂದ ತಡೆಯಲಾಗಲಿಲ್ಲ. ಆ ಕಾಟಿನ ಸುತ್ತ ಹಾಕಿದ್ದ ಬಿಳಿಯ ಪರದೆಗಳನ್ನು ಮೆಲ್ಲಗೆ ಎಳಕೊಂಡು ಪಕ್ಕದಲ್ಲೇ ಮಲಗಿ ಮೊಲೆಯೂಡಿಸಿಬಿಟ್ಟೆ. ಮಗುವಿನ ಮುಖದಲ್ಲೊಂದು ಕಿರುನಗೆ ಮಿಂಚಿದಂತಾಯಿತು. ಎಂಥಾ ಖುಷಿ ಗೊತ್ತಾ?’ ಅಮ್ಮ ಹೀಗೆ ನನ್ನೊಂದಿಗೆ ಆ ಕ್ಷಣವನ್ನು ಹಂಚಿಕೊಂಡಿದ್ದಳು. ಆವತ್ತೂ ಅಮ್ಮನ ಕಣ್ಣು ತುಂಬಿ ತುಳುಕುತ್ತಿತ್ತು. ಅದು ಖುಷಿಯ ಕಣ್ಣೀರು. ಡಾಕ್ಟರು ಹತ್ತಿರ ಬರಬೇಡಿ ಅನ್ನುತ್ತಿದ್ದರು. ಮುಂದೆ ಅಲ್ಲಿದ್ದ ಹದಿನೈದು ದಿನವೂ ಅಮ್ಮ ಕದ್ದು ಕದ್ದು ವಾರ್ಡಿನೊಳಗೆ ಹೋಗಿ ಎದೆಹಾಲನ್ನೂಡಿಸುವ ಕೆಲಸ ಜಾರಿಯಲ್ಲಿಟ್ಟಿದ್ದಳು. ಅಪ್ಪ ಪ್ರಾರ್ಥನೆಯನ್ನು ಜಾರಿಯಲ್ಲಿಟ್ಟಂತೆ. ಎದೆಹಾಲು ದೇಹದ ವಿಷವನ್ನೆಲ್ಲ ಕರಗಿಸಿ ಹಾಕಿತೇ?

‘ನಾನು ಬೆಂಗಳೂರಿಂದ ಮೆಡಿಕಲ್ ಮುಗಿಸಿ ಊರಿಗೆ ಬಂದ ಮೊದಲ ದಿನ ಅಪ್ಪ ನನ್ನನ್ನು ಅದೇ ಸೌಪರ್ಣಿಕಾ ನದಿಯ ತಟಕ್ಕೆ ಕರೆದುಕೊಂಡು ಹೋಗಿದ್ದರು. ನಾನು ನಿನ್ನೆ ಸಂಜೆ ಕುಳಿತ ಬಂಡೆಯ ಇಳಿಜಾರಿನಲ್ಲೇ ಕುಳಿತೆವು. ಅಪ್ಪ ಮೊದಲ ಬಾರಿಗೆ ಅಷ್ಟೂ ಘಟನೆಗಳನ್ನು ನನ್ನ ಮುಂದೆ ಹರಿವಿಕೊಳ್ಳುತ್ತಾ ಹೋದರು.’

‘ಆಸ್ಪತ್ರೆಯಿಂದ ಬರುವ ಹೊತ್ತಿಗೆ ನಾವು ಸಂಪೂರ್ಣ ಬರಿದಾಗಿದ್ದೆವು’ ಎನ್ನುತ್ತಾ ಅಪ್ಪ ಮಾತು ನಿಲ್ಲಿಸಿದರು.

‘ಎಷ್ಟು ತಿಂಗಳು ಇದ್ದಿರಿ ಅಪ್ಪಾ ಆಸ್ಪತ್ರೆಯಲ್ಲಿ? ಎಷ್ಟಾಗಿತ್ತು ಆಸ್ಪತ್ರೆ ಬಿಲ್ಲು?’

‘ಒಂಬತ್ತು ಲಕ್ಷದ ಎಪ್ಪತ್ತೆಂಟು ಸಾವಿರ ರೂಪಾಯಿ!’

‘ಓಹ್! ಮತ್ತೆ?’

‘ಅದೂ ನಿನ್ನ ಅದೃಷ್ಟ. ನೀನು ಬರುವಾಗಲೇ ಮೆಡಿಕಲ್ ಕವರೇಜ್ ಮಾಡಿಸಿಕೊಂಡೇ ಬಂದಿದ್ದಿ’